# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **726** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ಸಚಿವರು** | **ಉನ್ನತ ಶಿಕ್ಷಣ ಸಚಿವರು** |
| **ಉತ್ತರಿಸಬೇಕಾದ ದಿನಾಂಕ** | **16.12.2024** |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮಂಗಳೂರು ವಿಶ್ವವಿದ್ಯಾಲಯದ ಅಧೀನದಲ್ಲಿ ಇರುವ ಸಂಯೋಜಿತ ಕಾಲೇಜುಗಳನ್ನು ನಿರ್ವಹಣೆ ಮಾಡಲು ವಿಶ್ವವಿದ್ಯಾನಿಲಯ ಬಳಿ ಹಣಕಾಸಿನ ತೊಂದರೆಗಳು ಇರುವುದರಿಂದ ಅದನ್ನು ಸರ್ಕಾರವೇ ವಹಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕೆಂಬ ಒತ್ತಾಯವನ್ನು ಪರಿಗಣಿಸದಿರಲು ಕಾರಣವೇನು; ಸರ್ಕಾರ ಈ ಕಾಲೇಜುಗಳ ನಿರ್ವಹಣೆಗಾಗಿ ವಿಶ್ವವಿದ್ಯಾನಿಲಯಕ್ಕೆ ನೀಡುವ ಅನುದಾನ ಎಷ್ಟು? (ವಿವರ ನೀಡುವುದು)</td><td>ಮಂಗಳೂರು ವಿಶ್ವವಿದ್ಯಾನಿಲಯವನ್ನು ಒಳಗೊಂಡಂತೆ ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಿಗೆ ಶೈಕ್ಷಣಿಕ ಚಟುವಟಿಕೆಗಳ ವಿಸ್ತರಣೆಗಾಗಿ / ನಿರ್ವಹಣೆಗಾಗಿ ರಾಜ್ಯ ವಲಯದಿಂದ ಯಾವುದೇ ಅನುದಾನವನ್ನು ನೀಡಲಾಗುತ್ತಿಲ್ಲ. ಬದಲಿಗೆ ಆರ್ಥಿಕ ಇಲಾಖೆಯು ಆಯಾ ಸಾಲಿಗೆ ಉನ್ನತ ಶಿಕ್ಷಣ ಇಲಾಖೆಗೆ ಹಂಚಿಕೆಯಾಗುವ ಆಯವ್ಯಯದಡಿ ರಾಜ್ಯದ ವಿಶ್ವವಿದ್ಯಾಲಯಗಳ ನೌಕರರ ವೇತನ ಮತ್ತು ಪಿಂಚಣಿಗಾಗಿ ಮಾತ್ರ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.<br><br>ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಕಳೆದ ಮೂರು ವರ್ಷಗಳಲ್ಲಿ ಲೆಕ್ಕಶೀರ್ಷಿಕೆ 2202-03-102-0-05 ರಡಿ ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th>Sub Account</th><th>Accounts 2022-23</th><th>Budget Estimates 2023-24</th><th>Revised Estimate 2023-24</th><th>Budget Estimate</th></tr>
<tr><td>101-Grant-in-aid salaries</td><td>5174.54</td><td>6210.00</td><td>621.00</td><td>6025.07</td></tr>
<tr><td>103 – Grant-in-aid General</td><td>200.00</td><td>--</td><td>--</td><td>--</td></tr>
<tr><td>118 – Grant-in-aid Pension</td><td>2561.00</td><td>1000.00</td><td>1000.00</td><td>1000.00</td></tr>
<tr><td>Total</td><td>7935.54</td><td>7210.00</td><td>7210.00</td><td>7025.07</td></tr>
</table></td></tr>
<tr><td>(ಆ)</td><td>ವಿಶ್ವವಿದ್ಯಾನಿಲಯ ಅಧೀನದಲ್ಲಿರುವ ಉಡುಪಿ ಜಿಲ್ಲೆಯ ಬೆಳಪು ಪ್ರದೇಶದಲ್ಲಿ ಸ್ಥಾಪಿಸಲಾದ ಸಂಶೋಧನೆ ಕೇಂದ್ರದ ವಿದ್ಯಾರ್ಥಿಗಳ ಕೊರತೆ ಇದ್ದು, ಇದರ ಸ್ಥಾಪನೆ ಮೀಸಲಿಟ್ಟ ಹಣದಲ್ಲಿ ದುರುಪಯೋಗವಾಗಿದ್ದು ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು; (ವಿವರ ನೀಡುವುದು)</td><td>ಮಂಗಳೂರು ವಿಶ್ವವಿದ್ಯಾನಿಲಯ ಅಧೀನದಲ್ಲಿರುವ ಉಡುಪಿ ಜಿಲ್ಲೆಯ ಬೆಳಪು ಪ್ರದೇಶದಲ್ಲಿ ಸ್ಥಾಪಿಸಲಾದ ಸಂಶೋಧನಾ ಕೇಂದ್ರ ಕಟ್ಟಡದ ನಿರ್ಮಾಣ ಕಾರ್ಯದ ಕಾಮಗಾರಿಯು ಅಂತಿಮ ಹಂತದಲ್ಲಿದ್ದು, ಸಂಶೋಧನಾ ಕೇಂದ್ರವು ಉದ್ಘಾಟನೆಯಾಗಿರುವುದಿಲ್ಲ. ಕಾಮಗಾರಿ ಮುಕ್ತಾಯಗೊಂಡ ನಂತರ ವಿಶ್ವವಿದ್ಯಾಲಯವು ಸಂಶೋಧನಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಕ್ರಮ ಕೈಗೊಳ್ಳುತ್ತದೆ.<br><br>ಈ ಕೇಂದ್ರದ ಸ್ಥಾಪನೆಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 87 ಯುಡಿಎ 2015, ದಿನಾಂಕ: 11.07.2017ರ ಆದೇಶದನ್ವಯ ರೂ. 50.00 ಕೋಟಿ ಅನುದಾನ ಬಿಡುಗಡೆಗೆ ಮಂಜೂರಾತಿ ನೀಡಿದ್ದು, ರೂ.38,34,00,000/- ಮೊತ್ತವು ಬಿಡುಗಡೆಯಾಗಿರುತ್ತದೆ. ಈ ಮೊತ್ತದಲ್ಲಿ ರೂ.30,50,00,000/-ಗಳನ್ನು ಈಗಾಗಲೇ ಮಂಗಳೂರು ವಿಶ್ವವಿದ್ಯಾಲಯವು ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಪಾವತಿಸಿರುತ್ತದೆ.</td></tr>
</table>

| | | |
|---|---|---|
| | | ಬಾಕಿ ಮೊತ್ತ ರೂ. 7.84 ಕೋಟಿಯಲ್ಲಿ ರೂ. 7.50 ಕೋಟಿಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ಹಾಸ್ಟೆಲ್ ನಿರ್ಮಾಣ ಕಾಮಗಾರಿಗೆ ಪಾವತಿಸಲಾಗಿರುತ್ತದೆ. ವಿಶ್ವವಿದ್ಯಾಲಯದ ತುರ್ತು ಅಗತ್ಯತೆ ಹಿನ್ನಲೆಯಲ್ಲಿ ರೂ. 7.50 ಕೋಟಿಯನ್ನು ಬಳಸಿಕೊಳ್ಳಲಾಗಿದ್ದು, ಹಣ ದುರುಪಯೋಗವಾಗಿರುವುದಿಲ್ಲ. ಬೇರೆ ಉದ್ದೇಶಕ್ಕೆ ನೀಡಿದ ಈ ಮೊತ್ತವನ್ನು ವಿಶ್ವವಿದ್ಯಾಲಯವು ಬೆಳಪು ಯೋಜನೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತದೆ. |
| (ಇ) | ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರ ಕೊರತೆಯಿಂದ ವಿದ್ಯಾರ್ಥಿಗಳ ಮೇಲೆ ಉಂಟಾಗುವ ತೊಂದರೆಗಳಿಗೆ ಯಾರನ್ನು ಹೊಣೆಗಾರನ್ನಾಗಿ ಮಾಡಲಾಗುತ್ತದೆ; (ವಿವರ ನೀಡುವುದು) | ಮಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಹಾಗೂ ಘಟಕ ಕಾಲೇಜುಗಳಲ್ಲಿ ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಆರ್ಥಿಕ ಇಲಾಖೆಯ ಸಹಮತಿ ಪಡೆಯಲು ಕ್ರಮವಹಿಸಲಾಗಿದ್ದು, ಪ್ರಸ್ತುತ ಕಡತವು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.<br><br>ಮುಂದುವರೆದು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 56ರಡಿ ವಿಶ್ವವಿದ್ಯಾಲಯಗಳಿಗೆ ಮಂಜೂರಾದ ಹುದ್ದೆಗಳ ಎದುರಿಗೆ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿ ಹುದ್ದೆಗಳಿಗೆ ಒಂದು ವರ್ಷಕ್ಕೆ ಹೆಚ್ಚಾಗದಂತೆ ಅವಧಿಗೆ ವಿಳಂಬವಿಲ್ಲದೇ ತಾತ್ಕಾಲಿಕ ನೇಮಕಾತಿಗಳನ್ನು ಮಾಡಿಕೊಳ್ಳಲು ಅವಕಾಶವಿದ್ದು, ಅದರನ್ವಯ ವಿಶ್ವವಿದ್ಯಾಲಯವು ಮಂಜೂರಾದ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕ/ಗುತ್ತಿಗೆ ಆಧಾರದ ಮೇಲೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ವಿಶ್ವವಿದ್ಯಾಲಯದ ಶೈಕಣಿಕ ಚಟುವಟಿಕೆಗಳನ್ನು ನಡೆಸುತ್ತಿದೆ. |
| (ಈ) | ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲೀಷ್ ಬೋಧನೆ (Speeking & Writing) ಮಾಡುತ್ತಿರುವುದು ಸರಿಯೇ; ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆ ಮಾಡಬೇಕಾದ ಸಂಸ್ಥೆಗಳಲ್ಲಿ ಈ ಹಂತದ ಶಿಕ್ಷಣ ನೀಡುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವುದೇ? | ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ನಡೆಸಲಾಗುವ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನಿಯಂತ್ರಿಸುವ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯ ವಿನಿಯಮದಲ್ಲಿ ಕಲಿಕಾ ವಿಧಾನವನ್ನು ಇಂಗ್ಲೀಷ್ ಅಥವಾ ಕನ್ನಡ ಮಾಧ್ಯಮದಲ್ಲಿ ನಡೆಸಬಹುದಾಗಿರುತ್ತದೆ. ಅಲ್ಲದೇ, ವೃತ್ತಿಪರ ಕಾರ್ಯಕ್ರಮಗಳಾದ ಸ್ನಾತಕೋತ್ತರ ಮತ್ತು ಸಂಶೋಧನಾ ಕಾರ್ಯಕ್ರಮಗಳಿಗೆ ರಾಜ್ಯದ, ಹೊರ ರಾಜ್ಯದ ಮತ್ತು ಅಂತರಾಷ್ಟ್ರೀಯ ವಿದ್ಯಾರ್ಥಿಗಳು ಪ್ರವೇಶಾತಿ ಬಯಸಿ ವಿಶ್ವವಿದ್ಯಾಲಯಕ್ಕೆ ಬರುವುದರಿಂದ, ಎಲ್ಲಾ ವಿದ್ಯಾರ್ಥಿಗಳಿಗೂ ಅನುಕೂಲವಾಗುವ ರೀತಿಯಲ್ಲಿ ವಿಶ್ವವಿದ್ಯಾಲಯಗಳೂ ಬೋಧನೆಗೆ ಕ್ರಮ ಕೈಗೊಳ್ಳುತ್ತವೆ. |

ಸಂಖ್ಯೆ: ಇಡಿ 162 ಯುಡಿವಿ 2024

(ಡಾ: ಎಂ. ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು